ಲ್ಯಾಂಡ್ ಲಾರ್ಡ್ಸ್‌ನಿಂದಾಗಲೀ ತೊಂದರೆಯಾದಾಗ ನ್ಯಾಯವನ್ನು ದೊರಕಿಸಿಕೊಡುವುದಕ್ಕಾಗಿವುದಿಲ್ಲ. ಆದುದರಿಂದ ಸಂಚಾರಿ ನ್ಯಾಯಾಲಯಂಗಳನ್ನು ಪ್ರಾರಂಭಿಸಿದರೆ ಆ ಬಡ ಜನರಿಗೆ ಅನುಕೂಲವಾಗುವುದಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಬಡವರಿಗೆ ಉಚಿತವಾಗಿ ಕಾನೂನಿನ ನೆರವನ್ನು ಕೊಡತಕ್ಕಂಥ ಯೋಜನೆ ಈಗಾಗಲೇ ಜಾರಿಯಲ್ಲಿದೆ. ೮ ಸಾವಿರಕ್ಕಿಂತ ಕಡಿಮೆ ವರಮಾನವಿರತಕ್ಕವರೆಲ್ಲರೂ ಕೂಡ ನ್ಯಾಯವನ್ನು ದೊರಕಿಸಿ ಕೊಡುವುದಕ್ಕೋಸ್ಕರವಾಗಿ ಈಗಾಗಲೇ ಉಚಿತ ಕಾನೂನು ನೆರವನ್ನು ಕೊಡುವ ಯೋಜನೆ ಜಾರಿಯಲ್ಲಿದೆ. ಇದನ್ನು ಬಲಗೊಳಿಸುವುದಕ್ಕೋಸ್ಕರವಾಗಿ ನಾವು ಪ್ರಯತ್ನ ಮಾಡಿ ಹೊಸದಾಗಿ ಸಮಿತಿಗಳನ್ನು ಸಹ ಸ್ಥಾಪನೆ ಮಾಡಿದ್ದೇವೆ. ಮತ್ತು ಮಾನ್ಯ ಸದಸ್ಯರು ಇಂತಹ ಕಡೆ ಇಂತಹವರಿಗೆ ಸಹಾಯಬೇಕಾಗಿದೆ ಎಂದು ಹೇಳಿದರೆ ಆ ವಿಚಾರದಲ್ಲಿ ನಾನು ಸೂಕ್ತ ಕ್ರಮ ತೆಗೆದುಕೊಂಡು ಅವರಿಗೆ ಕೋರ್ಟಿನಲ್ಲಿ ನ್ಯಾಯ ದೊರಕಿಸಿಕೊಡುವುದಕ್ಕೆ ಸಹಾಯ ಮಾಡುತ್ತೇನೆ.

ಶ್ರೀ ವಿ. ಎಸ್ ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೆ, ಬಡವರಿಗೆ ''ಉಚಿತ ಕಾನೂನು ನೆರವು'' ಯೋಜನೆ ಏನು ಉಂಟು ಅದು ನಡೆಯುತ್ತಾ ಇರುವಂತಹ ರೀತಿಯನ್ನು ನೋಡಿದರೆ ಸರ್ಕಾರದ ವತಿಯಿಂದ ಕೊಡುವಂಥ ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಹೋಗುವುದೇ ಬೇಡ ಎಂದು ಹೇಳತಕ್ಕ ಜಿಗುಪ್ಸೆಯ ಪತ್ರಗಳು ತಮಗೆ ಏನಾದರೂ ಬಂದಿದೆಯೇ ? ಬಂದಿದ್ದರೆ ಅಂಥವರಿಗೆ ತಾವು ನ್ಯಾಯವನ್ನು ದೊರಕಿಸಿಕೊಡುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಮುಂಚೆ ಈಗಾಗಲೇ ''ಉಚಿತ ಕಾನೂನು ನೆರವು'' ಇದರ ಬಗ್ಗೆ ಸರ್ಕಾರ ಏನು ಕಾಳಜಿ ತೋರಿಸಿದೆ ಎಂದು ಹೇಳಬೇಕಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದಿನ ಪದ್ಧತಿ ಪ್ರಕಾರ ಉಚಿತ ಕಾನೂನು ನೆರವು ಕೊಡತಕ್ಕದ್ದರ ಆಶ್ರಯದಲ್ಲಿ ಕೋರ್ಟಿನಲ್ಲಿರತಕ್ಕಂಥ ಅಥವಾ ಕೆಲವು ಕಡೆ ಜಿಲ್ಲಾ ಮಟ್ಟದಲ್ಲಿ ಒಬ್ಬೊಬ್ಬರು ನ್ಯಾಯವಾದಿಗಳನ್ನು ನೇಮಕಮಾಡಿತ್ತು. ಈ ವ್ಯವಸ್ಥೆ ಸರಿಯಾಗಿ ನಡೆಯುತ್ತಾ ಇಲ್ಲ ಎನ್ನುವ ಕಾರಣಕ್ಕೋಸ್ಕರ ಕೋರ್ಟಿನಲ್ಲಿರತಕ್ಕಂಥ ಅಥವಾ ಎಲ್ಲಾ ತಾಲ್ಲೂಕುಗಳಲ್ಲೂ ಜಿಲ್ಲಾ ಮಟ್ಟವೂ ಸೇರಿ ಕಾನೂನು ನೆರವು ಕೊಡತಕ್ಕ ಸಮಿತಿಗಳು ಈಗಾಗಲೇ ಅಸ್ತಿತ್ವಕ್ಕೆ ಬರುವಹಾಗೆ ಮಾಡಿದ್ದೇವೆ. ಆ ಸಮಿತಿಯವರು ಈ ಜವಾಬ್ದಾರಿಯನ್ನು ತೆಗೆದುಕೊಂಡು ಹೆಚ್ಚಿನ ಮತ್ತು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನತಕ್ಕಂಥ ಉದ್ದೇಶವನ್ನಿಟ್ಟುಕೊಂಡು ನಾನೇ ಸುಮಾರು ೧೯ ಜಿಲ್ಲೆಗಳಿಗೆ ಹೋಗಿ ವಕೀಲರನ್ನು ಕಂಡು, ವಕೀಲರು ಈ ಕೆಲಸದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಮನವಿಮಾಡಿಕೊಂಡು ಬಂದಿದ್ದೇನೆ. ಈ ಹೊಸ ವ್ಯವಸ್ಥೆಯಿಂದ ನೀವು ಹೇಳಿದಂಥ ನ್ಯೂನತೆಗಳನ್ನು ಬಿಟ್ಟು ಕಾನೂನು ನೆರವು ಸಿಗುವುದಕ್ಕೆ ಸಹಾಯವಾಗುತ್ತದೆ ಎಂಬ ನಂಬಿಕೆ ನನಗೆ ಇದೆ.

ಶ್ರೀ ವಿ. ಎಸ್. ಆಚಾರ್ಯ.—ನಾನು ಹೇಳುವುದೇನೆಂದರೆ, ತಿಂಗಳಿಗೊಮ್ಮೆಯಾದರೂ ತಾಲ್ಲೂಕು ಕೇಂದ್ರದಲ್ಲಿರತಕ್ಕವರು ಈ ಬಗ್ಗೆ ಪ್ರಚಾರಪಡಿಸಿ, ಬಡವರನ್ನು ಭೇಟಿಯಾಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಪ್ರಚಾರ ಒಂದೇ ಅಲ್ಲ, ನಾನಾ ರೀತಿಯಲ್ಲಿ ಈ ಸ್ಕೀಮನ್ನು ಜಾರಿಗೆ ತರಬೇಕು, ಕೋರ್ಟಿನಲ್ಲಿ ವ್ಯವಹಾರ ಇರತಕ್ಕವರು ಇದರ ಉಪಯೋಗ ಪಡೆಯಬೇಕು ಎನ್ನತಕ್ಕ ಉದ್ದೇಶದಿಂದ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ವ್ಯಾಪಕವಾದಂಥ ರೀತಿಯಲ್ಲಿ ಪ್ರಚಾರ ಕೈಗೊಳ್ಳತಕ್ಕಂಥ ಕಾರ್ಯಕ್ರಮ ಇಟ್ಟುಕೊಂಡಿದೆ.

ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವ

೬. ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಪಟ್ಟಣ) —ಮಾನ್ಯ ಪ್ರಚಾರ ವಾರ್ತಾ ಹಾಗೂ ಪುರಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಕರ್ನಾಟಕದಲ್ಲಿ ಅತ್ಯುತ್ತಮ ನಿರ್ದೇಶಕರಾಗಿರುವ ಪುಟ್ಟಣ್ಣ ಕಣಗಲ್ ಅವರ ಚಿತ್ರಗಳನ್ನು ಕೇಂದ್ರ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶಿಸಲು ಅನುಮತಿಯನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಮಾನ್ಯ ಪ್ರಚಾರ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

೧. ಬಂದಿದೆ.

೨. ಈ ವಿಷಯದಲ್ಲಿ ರಾಷ್ಟ್ರೀಯ ಚಲನ ಚಿತ್ರಅಭಿವೃದ್ಧಿ ಕಾರ್ಪೊರೇಷನ್ನಿನಲ್ಲಿ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಗೆ ಪ್ರಾತಿನಿಧ್ಯವಿಲ್ಲದ ಕಾರ್ಯಾ ''ಫಿಲ್ಮೋತ್ಸವ-೮೪'' ನ್ನು ಬಹಿಷ್ಕರಿಸಲಾಗಿದೆ, ಹಾಗೂ ಈ ಸಂಬಂಧವಾಗಿ ಕೇಂದ್ರ ವಾರ್ತಾ ಸಚಿವರಿಗೆ ಸಂದೇಶ ಒಂದನ್ನು ಕಳುಹಿಸಿಕೊಡಲಾಗಿದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಸ್ವಾಮಿ, ಕರ್ನಾಟಕದಲ್ಲಿ ಅತ್ಯುತ್ತಮ ನಿರ್ದೇಶಕರಾಗಿರುವ ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳನ್ನು ಕೇಂದ್ರ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶಿಸಲು ಅನುಮತಿಯನ್ನು ನೀಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ, ಬಂದಿದೆ ಎಂದು ಹೇಳಿದ್ದಾರೆ. ಇದಕ್ಕೆ ಕಾರಣವೇನಾದರೂ ಇದೆಯೇ ? ಈ ಚಿತ್ರಗಳನ್ನು ಪ್ರದರ್ಶಿಸಲು ಅವಕಾಶ ಕೊಡದೇ ಇರುವುದಕ್ಕೆ ಕಾರಣ ಏನಾದರೂ ಇದೆಯೇ ? ಮತ್ತೆ ಈ ಚಿತ್ರೋತ್ಸವದಲ್ಲಿ ಕರ್ನಾಟಕದವರು ಯಾರಾದರೂ ಸದಸ್ಯರುಗಳು ಇದ್ದಾರೆಯೇ ?

ಅಧ್ಯಕ್ಷರು.—ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಡೈರೆಕ್ಟರ್ ಆಫ್ ಫಿಲ್ಮ್ ಫೆಡರೇಷನ್ ಅವರು ಫಿಲ್ಮೋತ್ಸವವನ್ನು ಏರ್ಪಾಟು ಮಾಡಿದ್ದರು. ಅವರಿಗೆ ನಾನು ಪತ್ರ ಬರೆದಿದ್ದೆ. ಮತ್ತೆ ಕೇಂದ್ರದ ಮಂತ್ರಿಗಳಿಗೂ ಪತ್ರ ಬರೆದೆ. ಪುಟ್ಟಣ್ಣ ಕಣಗಾಲ್‌ರವರ ಚಿತ್ರಗಳನ್ನು ಆಯ್ಕೆಮಾಡಿ, ಕೈಬಿಟ್ಟಿದ್ದೀರಿ ಎಂದು ಬರೆದೆ. ಅದಕ್ಕೆ ಅವರು ನನಗೆ ಉದ್ದವಾದ ಪತ್ರ ಬರೆದಿದ್ದಾರೆ ಆದರಲ್ಲಿ ಯಾರು ತೀರಿ ಹೋಗಿದ್ದಾರೆ ಅವರ ಚಿತ್ರಗಳನ್ನು ಮಾತ್ರ ಆಯ್ಕೆ ಮಾಡಿದ್ದೇವೆ, ಈ ಕಾರಣದಿಂದ ಪುಟ್ಟಣ್ಣ ಕಣಗಾಲ್‌ರವರ ಚಿತ್ರವನ್ನು ಕೈಬಿಟ್ಟಿದ್ದೇವೆ ಎಂದು ನನಗೆ ತಿಳಿಸಿದ್ದಾರೆ.

ಅಧ್ಯಕ್ಷರು.—ಅವರು ಬದುಕಿರುವುದು ಅಪರಾಧ.

ಶ್ರೀ ಕೆ. ಎಸ್. ಕಾಳಮರಿಗೌಡ.—ಬದುಕಿರುವುದಲ್ಲ, ತೀರಿ ಹೋಗಿರುವವರ ಚಿತ್ರಿಗಳನ್ನು ಆಯ್ಕೆ ಮಾಡಿದ್ದಾರೆ. ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ಕಾರ್ಪೊರೇಷನ್ನಿನಲ್ಲಿ ಕರ್ನಾಟಕದವರು ಯಾರಾದರೂ ಸದಸ್ಯರಾಗಿದ್ದಾರೆಯೇ ?

ಶ್ರೀ ಎಂ. ರಘುಪತಿ.—ಕರ್ನಾಟಕದವರು ಯಾರೂ ಇಲ್ಲವೇದೇ ಅದನ್ನು ಬಹಿಷ್ಕಾರ ಮಾಡಿದ್ದೇವೆ. ದಕ್ಷಿಣ ಭಾರತದವರು ಯಾರು ಇಲ್ಲ. ಆದ್ದರಿಂದ ಫಿಲ್ಮೋತ್ಸವದಲ್ಲಿ ಭಾಗವಹಿಸಬೇಕು ಎಂದು ನಮಗೆ ಆಹ್ವಾನ ಬಂದಿದ್ದರೂ ಅದನ್ನು ತಿರಸ್ಕರಿಸಿದ್ದೇವೆ. ಕರ್ನಾಟಕಕ್ಕೆ ಗೌರವ ಕೊಡಬೇಕು, ಕನ್ನಡಿಗರಿಗೆ ಗೌರವ ಸಿಗಬೇಕು ಎನ್ನುವ ಕಾರಣದಿಂದ ಬಹಿಷ್ಕರಣ ಹಾಕಿದ್ದೇನೆ.

ಶ್ರೀ ಬಿ. ಬೈರಪ್ಪಾಜಿ.—ಫಿಲ್ಮೋತ್ಸವವನ್ನು ಬಹಿಷ್ಕರಿಸುವುದಕ್ಕಿಂತ ಸ್ವಲ್ಪ ವಿವೇಚನೆಯಿಂದ ಅಲ್ಲಿಗೆ ಹೋಗಿ ದಕ್ಷಿಣ ಭಾರತದ ಪರವಾಗಿ ಪ್ರತಿನಿಧಿಗಳನ್ನು ಸೇರಿಸಬೇಕು ಎಂದು ಒತ್ತಾಯ ಮಾಡುವುದು ಸರಿಯಾದಂಥ ಕ್ರಮ ಆಗಿರಲಿಲ್ಲವೇ, ಮಾನ್ಯ ಮಂತ್ರಿಗಳು ಈ ಬಗ್ಗೆ ಯೋಚನೆ ಮಾಡಿದ್ದರೆ ಒಳ್ಳೆಯದಾಗಿತ್ತಲ್ಲವೆ ಎಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಇದು ಸಲಹೆ.

ಶ್ರೀ ಎಂ. ರಘುಪತಿ.—ಆ ಪ್ರಯತ್ನ ಮಾಡಿ ವಿಫಲವಾದ ಮೇಲೆ ಈ ರೀತಿ ಮಾಡಿದ್ದೇವೆ. ಶ್ರೀ ಭಗತ್‌ರವರು ಬೆಂಗಳೂರಿಗೆ ಬಂದಿದ್ದಾಗ ಫಿಲಂ ಛೇಂಬರ್‌ರವರು ಮತ್ತು ನಾನು ಖುದ್ದಾಗಿ ಹೇಳಿದೆವು. ಯಾವ ಕಾರಣಕ್ಕೋಸ್ಕರವಾಗಿ ನಮ್ಮ ಕರ್ನಾಟಕದವರಿಗೆ ಅವಕಾಶವನ್ನು ಕೊಡಬೇಕು, ನಮ್ಮ ಕನ್ನಡದವರಿಗೆ ನ್ಯಾಷನಲ್ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿ ಸದಸ್ಯತ್ವ ಕೊಡಬೇಕು ಎಂದು ಹೇಳಿದೆವು. ಈ ರೀತಿ ಮೊದಲು ಪ್ರಯತ್ನಮಾಡಿ ವಿಫಲರಾಗಿದ್ದರಿಂದ ಬಹಿಷ್ಕರಣ ಮಾಡಿದೆವೆಯೇ ಹೊರತು ಬೇರೆ ಕಾರಣದಿಂದ ಅಲ್ಲ.

ಶ್ರೀ ಎಂ. ಮಂಹದೇವ್.—ಪುಟ್ಟಣ್ಣ ಕಣಗಾಲ್‌ರವರ ಸಾಮಾಜಿಕ ಚಿತ್ರಗಳಿಗೆ ಬೇರೆ ನಿರ್ದೇಶಕರಿಗೆ ದೊರೆಯುವ ಸಾಲಭ್ಯ ಅಂದರೆ ಟ್ಯಾಕ್ಸ್ ಫ್ರೀ ಸರ್ಕಾರದ ಪ್ರೋತ್ಸಾಹ ಇನ್ನು ಮುಂತಾದವು ದೊರೆಯುತ್ತಾ ಇಲ್ಲ, ಅಡ್ಡಿ ಆಂತಕ ಇದೆ ಎಂದು ಸಾರ್ವಜನಿಕರಿಂದ ದೂರುಗಳು ಬಂದಿರುವುದು ನಿಜವೇ ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರಿಸುತ್ತೇನೆ.

ರಾಷ್ಟ್ರಾಧ್ಯಕ್ಷರ ಹಾಗೂ ರಾಜ್ಯಪಾಲರ ಒಪ್ಪಿಗೆಗಾಗಿ ಸಲ್ಲಿಸಿದ್ದ, ಇನ್ನೂ ಒಪ್ಪಿಗೆ ಸಿಗದಿರುವ ವಿಧೇಯಕಗಳ ಸಂಖ್ಯೆಯ ವಿಚಾರ.

೮೧. ಶ್ರೀ ಕೆ. ಜಿ. ಮಂಹೇಶ್ವರಪ್ಪ (ಮಾಯಕೊಂಡ)—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಎ) ರಾಷ್ಟ್ರಾಧ್ಯಕ್ಷರ ಹಾಗೂ ರಾಜ್ಯಪಾಲರ ಒಪ್ಪಿಗೆಗಾಗಿ ಕಳಂಹಿಸಲಾಗಿದ್ದು ಇನ್ನೂ ಒಪ್ಪಿಗೆ ಸಿಗಬೇಕಾಗಿರುವ ವಿಧೇಯಕಗಳ ಸಂಖ್ಯೆ ಎಷ್ಟು ? ಮತ್ತು ಎಷ್ಟು ಕಾಲದಿಂದ ಒಪ್ಪಿಗೆ ನಿರೀಕ್ಷಿಸಲಾಗಿದೆ.

ಬಿ) ಹಾಗೆ ಒಪ್ಪಿಗೆಯನ್ನು ತ್ವರಿತವಾಗಿ ಪಡೆಯಲು ಸರ್ಕಾರವು ಯಾವುದೇ ಕ್ರಮಗಳನ್ನು ಕೈಗೊಳ್ಳಲು ಆಲೋಚಿಸಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು).—

ಎ) ಲಗತ್ತಿಸಲಾಗಿರುವ ವಿವರಣೆಯಂತೆ, ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸಲಾದ ಒಂಬತ್ತು ವಿಧೇಯಕಗಳಿಗೆ ಇನ್ನೂ ಒಪ್ಪಿಗೆ ಸಿಗಬೇಕಾಗಿದೆ. ರಾಜ್ಯಪಾಲರಿಗೆ ಸಲ್ಲಿಸಿದ ಎಲ್ಲ ವಿಧೇಯಕಗಳಿಗೂ ಒಪ್ಪಿಗೆ ದೊರೆತಿದೆ.

ಬಿ) ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಪದೇ ಪದೇ ನೆನಪಿಸಲಾಗುತ್ತಿದೆ.

ರಾಷ್ಟ್ರಾಧ್ಯಕ್ಷರ ಸಮ್ಮತಿಗಾಗಿ ಒಪ್ಪಿಸಿದ ವಿಧೇಯಕಗಳ ಪಟ್ಟಿ

ಕ್ರಮಸಂಖ್ಯೆ	ವಿಧೇಯಕದ ಹೆಸರು	ಕಳುಹಿಸಿದ ದಿನಾಂಕ
೧.	ಅತ್ಯವಶ್ಯ ವಸ್ತುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, ೧೯೭೬.	೨೫-೧೧-೧೯೭೮
೨.	ಕರ್ನಾಟಕ ಸಿವಿಲ್ ಸೇವೆಗಳ ವಿಧೇಯಕ, ೧೯೭೯.	೨೯-೬-೧೯೭೯
೩.	ಕರ್ನಾಟಕ ಜೀಂದಿ ಕೆಲಸಗಾರರ ಕಲ್ಯಾಣ ನಿಧಿ ವಿಧೇಯಕ, ೧೯೮೧	೩೦-೧೧-೧೯೮೧
೪.	ಕಂಟ್ರಾಕ್ಟ್ ಕ್ಯಾರೇಜಂಗಳ (ತಿದ್ದುಪಡಿ) ವಿಧೇಯಕ, ೧೯೮೨.	೨೭-೮-೧೯೮೨
೫.	ಕರ್ನಾಟಕ ಸ್ಥಳೀಯ ಪ್ರದೇಶಗಳಲ್ಲಿ ಬಳಕೆ, ಉಪಯೋಗ ಅಥವಾ ಮಾರಾಟದ ಸಲುವಾಗಿ ಸರಕುಗಳ ಪ್ರವೇಶ ತೆರಿಗೆ (ತಿದ್ದುಪಡಿ) ವಿಧೇಯಕ, ೧೯೮೩.	೧೨-೯-೧೯೮೩
೬.	ಕರ್ನಾಟಕ ಮನರಂಜನಾ (ತಿದ್ದುಪಡಿ) ವಿಧೇಯಕ, ೧೯೮೩.	೩೦-೧೧-೧೯೮೩
೭.	ಕರ್ನಾಟಕ ಸ್ಥಳೀಯ ಪ್ರದೇಶಗಳಲ್ಲಿ ಬಳಕೆ, ಉಪಯೋಗ ಅಥವಾ ಮಾರಾಟದ ಸಲುವಾಗಿ ಸರಕುಗಳ ಪ್ರವೇಶ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೩.	೩೦-೧೧-೧೯೮೩
೮.	ಕರ್ನಾಟಕ ವೃತ್ತಿಗಳು, ವ್ಯಾಪಾರಗಳು ದಂದೆ (ಕಸುಬು) ಮತ್ತು ಉದ್ಯೋಗಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕ, ೧೯೮೩.	೩೦-೧೧-೧೯೮೩